**MYSOORU MITHRA**

Date: Saturday, March 28, 2015 | Page: 03

Edition: Mysore | Language: Kannada

# ಎಸ್‌ಡಿಎಂ–ಐಎಂಡಿ ೨೦ನೇ ಘಟಿಕೋತ್ಸವ

## ೧೪೭ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಮೈಸೂರು, ಮಾ.೨೭(ಪಿಎಂ)– ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣಾ ಅಭಿವೃದ್ಧಿ ಸಂಸ್ಥೆಯಲ್ಲಿ (ಎಸ್‌ಡಿಎಂ–ಐಎಂಡಿ) ಶುಕ್ರವಾರ ನಡೆದ ೨೦ನೇ ಘಟಿಕೋತ್ಸವದಲ್ಲಿ ೨೦೧೩–೨೦೧೫ನೇ ಸಾಲಿನ ನಿರ್ವಹಣಾಶಾಸ್ತ್ರದ ವಿವಿಧ ವಿಷಯಗಳ ಸ್ನಾತಕೋತ್ತರ ಪದವಿ ಡಿಪ್ಲೋಮಾ ಪ್ರಮಾಣ ಪತ್ರಗಳನ್ನು ೧೪೭ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಯಿತು.

ಅಲ್ಲದೆ, ಸಂಸ್ಥೆಯ ಅಧ್ಯಕ್ಷರ ಶ್ರೇಷ್ಠ ವಿದ್ಯಾರ್ಥಿ ಚಿನ್ನದ ಪದಕ, ಹಣಕಾಸು ವಿಷಯದಲ್ಲಿನ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ನೀಡುವ ಅಂಕುರ್ ಗುಪ್ತ ಸ್ಮಾರಕ ಅಲುಮ್ನಿ ಚಿನ್ನದ ಪದಕ ಹಾಗೂ ಮಾನವ ಸಂಪನ್ಮೂಲ ನಿರ್ವಹಣೆ ವಿಷಯದಲ್ಲಿನ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ನೀಡುವ ಚಿನ್ನದ ಪದಕಕ್ಕೆ ಭಾಜನರಾದ ಪಿ. ಅಪೂರ್ವ ಅವರಿಗೆ ಚಿನ್ನದ ಪದಕ ಗಳನ್ನು ಹಿಂದುಜಾ ಗ್ರೂಪ್‌ನ ಕಾರ್ಯನಿರ್ವಾಹಕ ಉಪಾಧ್ಯಕ್ಷ ಆರ್.ಸೇಶಸಾಯೀ ಪ್ರದಾನ ಮಾಡಿದರು.

ಸಮಗ್ರ ವಿಷಯದಲ್ಲಿ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ಅಂಕುರ್ ಗುಪ್ತ ಸ್ಮಾರಕ ಚಿನ್ನದ ಪದಕಕ್ಕೆ ಭಾಜನರಾದ ಎಂ.ಎಸ್.ನಿಶಾಂತ್, ಮಾರುಕಟ್ಟೆ ವಿಷಯದಲ್ಲಿ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ನೀಡುವ ಚಿನ್ನದ ಪದಕಕ್ಕೆ ಭಾಜನರಾದ ಅಭಿಜಿತ್ ವಿಜೇಯೇಂದ್ರ ಕೋರ್ತಿ, ವ್ಯವಸ್ಥೆ ವಿಷಯುದಲ್ಲಿ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ನೀಡುವ ಚಿನ್ನದ ಪದಕಕ್ಕೆ ಭಾಜನರಾದ ಕವಿತಾ ಮೇರಿ ಥಾಮಸ್, ಕಾರ್ಯಾಚರಣೆ ವಿಷಯದಲ್ಲಿ ಅತ್ಯುತ್ತಮ ಕಾರ್ಯ ಕ್ಷಮತೆಗೆ ನೀಡುವ ಚಿನ್ನದ ಪದಕ್ಕೆ ಭಾಜನರಾದ ಎನ್.ವಿಕಾಶ್ ಅವರಿಗೂ ಇದೇ ವೇಳೆ ಆರ್.ಸೇಶಸಾಯೀ ಚಿನ್ನದ ಪದಕ ಗಳನ್ನು ಪ್ರದಾನ ಮಾಡಿದರು.

ನಂತರ ಘಟಿಕೋತ್ಸವ ಭಾಷಣ ಮಾಡಿದ ಅವರು, ಸಮಾಜದಲ್ಲಿ ಹಾಗೂ ನಮ್ಮ ವೃತ್ತಿ ಕ್ಷೇತ್ರದಲ್ಲಿ ಉನ್ನತ ಬದಲಾವಣೆ ತರಲು ನಮ್ಮೊಬ್ಬರಿಂದಲೇ ಸಾಧ್ಯವೇ ಎಂದು ಕೈಚೆಲ್ಲಬಾರದು. ಕೇವಲ ಒಬ್ಬ ವ್ಯಕ್ತಿಯೇ ಬದಲಾವಣೆಗೆ ನಾಂದಿ ಹಾಡಿರುವ ಉದಾಹರಣೆಗಳು ಇತಿಹಾಸ ಪುಟಗಳಲ್ಲಿ ದಾಖಲಾಗಿವೆ. ನಮ್ಮ ಯುವ ಜನರು ಭೌದ್ಧಿಕವಾಗಿ ವಿಶಿಷ್ಟ ಸಾಮರ್ಥ್ಯ ಹೊಂದಿದ್ದು, ದೇಶದ ಅಭಿವೃದ್ಧಿಗೆ ಪೂರಕವಾಗಿ ಬದಲಾವಣೆ ತರಲು ಇವರು ಮನಸ್ಸು ಮಾಡಬೇಕಿದೆ. ಯುವಜನರು ಸಮಯ ಹಾಗೂ ಸಂಪನ್ಮೂಲಗಳ ಸಮರ್ಪಕ ಬಳಕೆಯೊಂದಿಗೆ ಉತ್ತಮ ಬದಲಾವಣೆಗೆ ನಾಂದಿ ಹಾಡಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂ–ಐಎಂಡಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ೨೦ನೇ ಘಟಿಕೋತ್ಸವದಲ್ಲಿ ವಿವಿಧ ವಿಷಯಗಳಲ್ಲಿ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ಚಿನ್ನದ ಪದಕಗಳನ್ನು ಪಡೆದ ವಿದ್ಯಾರ್ಥಿಗಳೊಂದಿಗೆ ಆರ್.ಸೇಶಸಾಯೀ, ಡಾ.ಡಿ.ವೀರೇಂದ್ರ ಹೆಗ್ಗಡೆ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಪದವಿ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಿದ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ಸಂಸ್ಥೆಯ ಅಧ್ಯಕ್ಷ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಮಾತನಾಡಿ, ಭಾರತವು ತನ್ನ ಸ್ವಸಾಮರ್ಥ್ಯದಿಂದ ಅಭಿವೃದ್ಧಿಯತ್ತ ಧಾಪುಗಾಲಾಲಿಡುತ್ತಿದೆ.

ಈ ಸಂದರ್ಭದಲ್ಲಿ ನಿರ್ವಹಣಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ವಿದ್ಯಾರ್ಥಿಗಳು ವೃತ್ತಿ ಕೌಶಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿ ದೇಶದ ಪ್ರಗತಿಗೆ ಕೊಡುಗೆ ನೀಡಬೇಕೆಂದು ಸಲಹೆ ನೀಡಿದರು.

ಬೆಂಗಳೂರಿನ ಟೈಟನ್ ಕೈಗಾರಿಕೆಯ ನಿರ್ವಹಣಾ ನಿರ್ದೇಶಕ ಭಾಸ್ಕರ್ ಭಟ್, ಉಜಿರೆಯ ಎಸ್‌ಡಿಎಂ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ಪ್ರೊ.ಎಸ್. ಪ್ರಭಾಕರ್, ಮುಂಬೈ ಟಾಟಾ ಸ್ಟೀಲ್‌ನ ಮಾಜಿ ಉಪಾಧ್ಯಕ್ಷ ಬಿ.ಮುತ್ತುರಾಮನ್, ಬೆಂಗಳೂರಿನ ಎಸ್‌ಡಿಎಂ ಎಜುಕೇಷನ್ ಟ್ರಸ್ಟ್‌ನ ಉಪಾಧ್ಯಕ್ಷ ಡಿ.ಸುರೇಂದ್ರ ಕುಮಾರ್, ಎಸ್‌ಡಿಎಂ–ಐಎಂಡಿ ನಿರ್ದೇಶಕ ಡಾ.ಎನ್.ಆರ್. ಪರಶು ರಾಮನ್, ಉಪನಿರ್ದೇಶಕಿ ಡಾ.ಹೆಚ್. ಗಾಯತ್ರಿ, ಸಂಸ್ಥೆಯ ಪಿಜಿಡಿಎಂ ಮುಖ್ಯಸ್ಥೆ ಪ್ರೊ.ಮಾಲತಿ ಶ್ರೀರಾಮ್ ಮತ್ತಿತರರು ಹಾಜರಿದ್ದರು.